# ಕರ್ನಾಟಕ ವಿಧಾನ ಪರಿಷತ್ತು

## (ನೂರ ನಲವತ್ತೊಂದನೆಯ ಅಧಿವೇಶನ)

## (ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

## ಶುಕ್ರವಾರ, 11ನೇ ಸೆಪ್ಟೆಂಬರ್, 2020

---

ಸಂಖ್ಯೆ: 76

ಈಗಾಗಲೇ ರಾಜ್ಯದಲ್ಲಿ ಕೊರೊನ ವೈರಸ್ ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಮಾನ್ಯ ಸದಸ್ಯರ ಆರೋಗ್ಯದ ಹಿತದೃಷ್ಟಿಯಿಂದ ಮುಂಜಾಗ್ರತಾ ಕ್ರಮವಾಗಿ ದಿನಾಂಕ:21.09.2020ರಿಂದ ಪ್ರಾರಂಭವಾಗಲಿರುವ 141ನೇ ಅಧಿವೇಶನಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಮಾರ್ಗಸೂಚಿಯಂತೆ ಕೆಳಕಂಡ ಕ್ರಮಗಳನ್ನು ತಪ್ಪದೆ ಅನುಸರಿಸುವ ಮೂಲಕ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಕೋರಲಾಗಿದೆ.

01. ಮಾನ್ಯ ಸದಸ್ಯರು ಸದನ ಆರಂಭವಾಗುವ 72 ಗಂಟೆಗಳ ಮುಂಚಿತವಾಗಿ ಕೋವಿಡ್-19ರ ಸಂಬಂಧದಲ್ಲಿ ಅವರವರ ಕ್ಷೇತ್ರದಿಂದಲೇ RT-PCR ಪರೀಕ್ಷೆಗೆ ಒಳಗಾಗಿ ದೃಢೀಕರಣವನ್ನುತರಲು ಕೋರಲಾಗಿದೆ. ಇದರ ಜೊತೆಗೆ ದಿನಾಂಕ:18.09.2020ರಿಂದ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲಿನಲ್ಲಿಯೂ ಸಹಾ RT-PCR ಪರೀಕ್ಷೆಯನ್ನು ನಡೆಸಲು ಸೂಕ್ತ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ.

02. ವಿಧಾನ ಪರಿಷತ್ತಿನ ಸಭಾಂಗಣವನ್ನು ಪ್ರವೇಶಿಸುವ ಮಾನ್ಯ ಸದಸ್ಯರು ಕಡ್ಡಾಯವಾಗಿ ಮಾಸ್ಕ್ ಮತ್ತು ಫೇಸ್ ಶೀಲ್ಡ್‌ನ್ನು ಧರಿಸಿರಬೇಕು ಹಾಗೂ ಚರ್ಚೆಯಲ್ಲಿ ಭಾಗವಹಿಸುವ ಸದಸ್ಯರು ಮಾಸ್ಕ್‌ನ್ನು ತಪ್ಪದೆ ಧರಿಸತಕ್ಕದ್ದು. (ಮಾನ್ಯ ಸದಸ್ಯರಿಗೆ ಮಾಸ್ಕ್, ಸ್ಯಾನಿಟೈಸರ್ ಹಾಗೂ ಫೇಸ್ ಶೀಲ್ಡ್‌ನ್ನು ಒದಗಿಸಲಾಗುವುದು)

03.ಸಾಮಾಜಿಕ ಅಂತರವನ್ನು ಕಾಪಾಡುವ ದೃಷ್ಟಿಯಿಂದ ಆಸನಗಳ ಮಧ್ಯೆ Transparent Fiber sheet ಅಳವಡಿಸಲಾಗಿರುತ್ತದೆ.

04. ಮಾನ್ಯ ಸದಸ್ಯರ ಆಪ್ತ ಸಹಾಯಕರು ಹಾಗೂ ಗನ್ ಮ್ಯಾನ್ ಅವರುಗಳಿಗೆ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲಿನ ಮುಂಭಾಗದಲ್ಲಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. (ವಿಧಾನ ಸೌಧದ ಮೊದಲನೇ ಮಹಡಿಯ ಪ್ರವೇಶಕ್ಕೆ ನಿರ್ಬಂಧಿಸಿದೆ)

05.ವಿಧಾನ ಪರಿಷತ್ತಿನ ಸಭಾಂಗಣದ ಮೊಗಸಾಲೆಗಳಲ್ಲಿ ಕುಳಿತುಕೊಳ್ಳುವ ಸಂದರ್ಭಗಳಲ್ಲಿ ಮಾನ್ಯ ಸದಸ್ಯರು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳತಕ್ಕದ್ದು.

06. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ನಿಯಮ 330, ಗಮನ ಸೆಳೆಯುವ ಸೂಚನೆಗಳು, ನಿಯಮ 68ರ ಸೂಚನೆಗಳು. ಶೂನ್ಯ ವೇಳೆ, ಇತ್ಯಾದಿ ಸೂಚನೆಗಳಿಗೆ ಸರ್ಕಾರದವರು ನೀಡುವ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸಿದ ತರುವಾಯ ಮಾನ್ಯ ಸದಸ್ಯರಿಗೆ ಈ–ಮೇಲ್ ಮುಖಾಂತರ ಕಳುಹಿಸಲಾಗುವುದು. ಇದಕ್ಕಾಗಿ ಮಾನ್ಯ ಸದಸ್ಯರು ತಮ್ಮ ಇ–ಮೇಲ್ ವಿಳಾಸವನ್ನು ವಿಧಾನ ಪರಿಷತ್ತಿನ ಮೊಗಸಾಲೆಯಲ್ಲಿ ಹಾಜರಾತಿ ಹಾಕುವ ಸ್ಥಳದಲ್ಲಿ (ಕೌಂಟರ್‌ನಲ್ಲಿ) ನೀಡತಕ್ಕದ್ದು.

07. ಪ್ರತಿದಿನ ವಿಧಾನ ಪರಿಷತ್ತಿನ ಸಭಾಂಗಣವನ್ನು ಹಾಗೂ ಅದರ ಸುತ್ತಮುತ್ತಲಿನ ಎಲ್ಲಾ ಆವರಣಗಳನ್ನು ಸ್ಯಾನಿಟೈಸರ್ ಮಾಡಲಾಗುವುದರಿಂದ ಯಾವುದೇ ಕಾಗದ ಪತ್ರ ಹಾಗು ವಸ್ತುಗಳನ್ನು ಆಸನಗಳ ಬಳಿಯೇ ಬಿಟ್ಟು ಹೋಗತಕ್ಕದ್ದಲ್ಲ.

08.ಪ್ರಸಕ್ತ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಅಧಿವೇಶನವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ.
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.**